ಕರ್ನಾಟಕ ಸರ್ಕಾರ

ಸಂಖ್ಯೆ:ಪಪೂಶಿಇ/ಶೈಶಾ/ಕ.ಜಾ.ಪ/2016-17

ನಿರ್ದೇಶಕರ ಕಛೇರಿ.
ಪದವಿ ಪೂರ್ವ ಶಿಕ್ಷಣ ಇಲಾಖೆ
ಸಂಪಿಗೆ ರಸ್ತೆ. 18ನೇ ಕ್ರಾಸ್
ಮಲ್ಲೇಶ್ವರಂ. ಬೆಂಗಳೂರು-12
ದಿನಾಂಕ: 16-02-2017.

**ಸುತ್ತೋಲೆ**

ವಿಷಯ: ಕನ್ನಡ ಜಾನಪದ ಪರಿಷತ್ತಿನ "ವಿಕಾಸಕ್ಕಾಗಿ ಜಾನಪದ" ಕಾರ್ಯಕ್ರಮವನ್ನು ರಾಜ್ಯದ ಎಲ್ಲಾ ಪದವಿ ಪೂರ್ವ ಕಾಲೇಜಿನಲ್ಲಿ ನಡೆಸಲು ಅನುಮತಿ ನೀಡುವ ಕುರಿತು.

ಉಲ್ಲೇಖ:1) ಅಧ್ಯಕ್ಷರು, ಕನ್ನಡ ಜಾನಪದ ಪರಿಷತ್ತಿನ ಸಂಖ್ಯೆ:ಕಜಾಪ/115/ವಿಕಾಸ ಜಾನಪದ/2016-17 ದಿನಾಂಕ 01/07/2016.
2) ಈ ಕಛೇರಿ ಸುತ್ತೋಲೆ ದಿನಾಂಕ 11/08/2016.
3) ಅಧ್ಯಕ್ಷರು, ಕನ್ನಡ ಜಾನಪದ ಪರಿಷತ್ತಿನ ಸಂಖ್ಯೆ:ಕಜಾಪ/115/ವಿಕಾಸ ಜಾನಪದ/2016-17 ದಿನಾಂಕ 01/02/2017.

*****

ಮೇಲ್ಕಂಡ ವಿಷಯಕ್ಕೆ ಸಂಬಂಧಿಸಿದಂತೆ ಉಲ್ಲೇಖ-1ರ ಪತ್ರದಲ್ಲಿ ಕೋರಿರುವಂತೆ ಉಲ್ಲೇಖ-02ರಲ್ಲಿ ಸುತ್ತೋಲೆ ಸಂಖ್ಯೆ:ಪಪೂಶಿ/ಶೈಶಾ/ಕ.ಜಾ.ಪ/2016-17 ದಿನಾಂಕ 11/08/2016ರಲ್ಲಿ ರಾಜ್ಯದ ಎಲ್ಲಾ ಪದವಿ ಪೂರ್ವ ಕಾಲೇಜುಗಳಿಗೆ ಸದರಿ "ವಿಕಾಸಕ್ಕಾಗಿ ಜಾನಪದ" ಕಾರ್ಯಕ್ರಮದ ಉಪಯೋಗ ಪಡೆದುಕೊಳ್ಳಲು ತಿಳಿಸಲಾಗಿತ್ತು.

ಉಲ್ಲೇಖ-03ರಲ್ಲಿ ಅಧ್ಯಕ್ಷರು, ಕನ್ನಡ ಜಾನಪದ ಪರಿಷತ್ ಇವರು ಇನ್ನೊಮ್ಮೆ ಕೋರಿಕೆ ಸಲ್ಲಿಸಿರುತ್ತಾರೆ. ಪತ್ರದ ಪ್ರತಿಯನ್ನು ಅಡಕಗೊಳಿಸಿದ್ದು, ಅಗತ್ಯ ಕ್ರಮ ಕೈಗೊಳ್ಳಲು ಸೂಚಿಸಿದೆ. ಹೆಚ್ಚಿನ ವಿವರಗಳಿಗೆ ಕನ್ನಡ ಜಾನಪದ ಪರಿಷತ್‌ನ ರಾಜ್ಯ ಕಾರ್ಯಾಧ್ಯಕ್ಷರಾದ ಡಾ॥ ಎಸ್ ಬಾಲಾಜಿ, ಮೊ:9900774442. ಇ-ಮೇಲ್: janapadaprapancha@gmail.com ನ್ನು ಸಂಪರ್ಕಿಸಬಹುದಾಗಿದೆ.

ತಮ್ಮ ವಿಶ್ವಾಸಿ,

ಜಂಟಿ ನಿರ್ದೇಶಕರು (ಶೈಕ್ಷಣಿಕ)
ಪದವಿ ಪೂರ್ವ ಶಿಕ್ಷಣ ಇಲಾಖೆ

ಪ್ರತಿಗಳು:

1. ರಾಜ್ಯದ ಎಲ್ಲಾ ಜಿಲ್ಲಾ ಉಪ ನಿರ್ದೇಶಕರು, ಪದವಿ ಪೂರ್ವ ಶಿಕ್ಷಣ ಇಲಾಖೆ ಇವರುಗಳಿಗೆ ಮುಂದಿನ ಕ್ರಮಕ್ಕಾಗಿ.
2. ಎಲ್ಲಾ ಪದವಿ ಪೂರ್ವ ಕಾಲೇಜುಗಳ ಪ್ರಾಂಶುಪಾಲರಿಗೆ ಜಿಲ್ಲಾ ಉಪ ನಿರ್ದೇಶಕರ ಮೂಲಕ ಅಗತ್ಯ ಕ್ರಮಕ್ಕಾಗಿ.
3. ಅಧ್ಯಕ್ಷರು, ಕನ್ನಡ ಜಾನಪದ ಪರಿಷತ್, 36/88, ಸ್ವತಂತ್ರ ಯೋಧರ ನಗರ, ಲಗ್ಗೆರೆ, ಹೊರವರ್ತುಲ ರಸ್ತೆ, ಬೆಂಗಳೂರು-560058.
4. ಶಾಖಾಧಿಕಾರಿಗಳು, ಇ-ಆಡಳಿತ, ಪದವಿ ಪೂರ್ವ ಶಿಕ್ಷಣ ಇಲಾಖೆ ಬೆಂಗಳೂರು ಇವರಿಗೆ ವೆಬ್ ಸೈಟ್‌ಗೆ ಅಳವಡಿಸಲು.
5. ಕಛೇರಿ ಪ್ರತಿ.

ನಿರ್ದೇಶಕರ ಕಛೇರಿ, ಪದವಿ ಪೂರ್ವ ಶಿಕ್ಷಣ ಇಲಾಖೆ ಸಂಪಿಗೆ ರಸ್ತೆ, 18ನೇ ಕ್ರಾಸ್,ಮಲ್ಲೇಶ್ವರಂ, ಬೆಂಗಳೂರು-12

ಸಂಖ್ಯೆ:ಪಪೂಶಿ/ಶೈಶಾ/ಕ.ಜಾ.ಪ/2016-17 ದಿನಾಂಕ: 11 /08/2016

## ಸುತ್ತೋಲೆ

ವಿಷಯ: ಕನ್ನಡ ಜಾನಪದ ಪರಿಷತ್ತಿನ "ವಿಕಾಸಕ್ಕಾಗಿ ಜಾನಪದ" ಕಾರ್ಯಕ್ರಮವನ್ನು ರಾಜ್ಯದ ಎಲ್ಲಾ ಪದವಿ ಪೂರ್ವ ಕಾಲೇಜಿನಲ್ಲಿ ನಡೆಸಲು ಅನುಮತಿಸುವ ಕುರಿತು.

ಉಲ್ಲೇಖ: ಟಿ.ಕೆ ಗೌಡ, ಅಧ್ಯಕ್ಷರು, ಕನ್ನಡ ಜಾನಪದ ಪರಿಷತ್ ಇವರ ಪತ್ರ ಸಂಖ್ಯೆ:ಕಜಾಪ/115/ವಿಕಾಸ ಜಾನಪದ/2016-17 ದಿನಾಂಕ 01/07/2016

****

ಮೇಲ್ಕಂಡ ವಿಷಯ ಹಾಗೂ ಉಲ್ಲೇಖಕ್ಕೆ ಸಂಬಂಧಿಸಿದಂತೆ ಕನ್ನಡ ಜಾನಪದ ಪರಿಷತ್ ಕರ್ನಾಟಕ ರಜ್ಯಾದ್ಯಂತ ಜಾನಪದ ಕಲೆಗಳ ಕ್ಷೇತ್ರಕಾರ್ಯ, ದಾಖಲೀಕರಣ, ತರಬೇತಿ ಮೂಲಕ ಜನಪದ ಕಲೆಗಳನ್ನು ತಮ್ಮ ಜಿಲ್ಲೆಯಲ್ಲಿ ಸಂರಕ್ಷಿಸುವ ಸಲುವಾಗಿ ಗ್ರಾಮ ಹಂತದಿಂದಲು ಸಮಿತಿಗಳನ್ನು ರಚಿಸಿ ಜಾನಪದ ಕಾರ್ಯವನ್ನು ಮಾಡುವ ಸಲುವಾಗಿ ಜಿಲ್ಲಾ ಘಟಕಗಳನ್ನು ರಚಿಸಿರುತ್ತದೆ. ರಾಜ್ಯದಲ್ಲಿ ಈಗಾಗಲೇ 29 ಜಿಲ್ಲಾ ಘಟಕಗಳು ರಚನೆಗೊಂಡಿದ್ದು ಕಾರ್ಯಪ್ರವೃತ್ತಿಯಲ್ಲಿದೆ. ಕನ್ನಡ ಜಾನಪದ ಪರಿಷತ್ ಕೇಂದ್ರ ಕಛೇರಿಯನ್ನು ಬೆಂಗಳೂರಿನಲ್ಲಿ ಸ್ಥಾಪಿಸಿದ್ದು ರಾಮನಗರ ಜಿಲ್ಲೆಯ ಮಾಗಡಿ ತಾಲ್ಲೂಕಿನ ತಾಳೆಕೆರೆ ಗ್ರಾಮದಲ್ಲಿ 10 ಎಕರೆ ವಿಸ್ತರಣದಲ್ಲಿ ಜಾನಪದ ಪ್ರಪಂಚ ಬಿ.ಜಿ.ಎಸ್ ಜಾನಪದ ತರಬೇತಿ ಕೇಂದ್ರವು ಸ್ಥಾಪಿಸಲಾಗುತ್ತಿದೆ.

ಈ ಹಿನ್ನೆಲೆಯಲ್ಲಿ ರಾಜ್ಯದ ಎಲ್ಲಾ ಸರ್ಕಾರಿ/ಸರ್ಕಾರೇತರ ಕಾಲೇಜುಗಳಲ್ಲಿ ಜಾನಪದ ಕಾರ್ಯಕ್ರಮಗಳಲ್ಲಿ ಭಾಗವಹಿಸುವ, ಭಾಗವಹಿಸಲು ಇಚ್ಚಿಸುವ ವಿದ್ಯಾರ್ಥಿ/ವಿದ್ಯಾರ್ಥಿನಿಯರು ಇದರ ಉಪಯೋಗ ಪಡೆದುಕೊಳ್ಳಲು ಈ ಮೂಲಕ ಸೂಚಿಸಿದೆ. ಆಯಾಯ ಕಾಲೇಜಿನ ಪ್ರಾಂಶುಪಾಲರಿಗೆ, ವಿದ್ಯಾರ್ಥಿ/ವಿದ್ಯಾರ್ಥಿನಿಯರಿಗೆ ಈ ಬಗ್ಗೆ ಮಾಹಿತಿ ಕೊಡುವ ಜವಾಬ್ದಾರಿಯನ್ನು ವಹಿಸಲಾಗಿದೆ.

ಜಂಟಿ ನಿರ್ದೇಶಕರು (ಶೈಕ್ಷಣಿಕ)
ಪದವಿ ಪೂರ್ವ ಶಿಕ್ಷಣ ಇಲಾಖೆ.

ಪ್ರತಿಗಳು:

1. ಜಿಲ್ಲಾ ಉಪ ನಿರ್ದೇಶಕರು, ಪದವಿ ಪೂರ್ವ ಶಿಕ್ಷಣ ಇಲಾಖೆ ಇವರುಗಳಿಗೆ ಮುಂದಿನ ಕ್ರಮಕ್ಕಾಗಿ.
2. ರಾಜ್ಯದ ಎಲ್ಲಾ ಕಾಲೇಜುಗಳ ಪ್ರಾಂಶುಪಾಲರಿಗೆ ಜಿಲ್ಲಾ ಉಪ ನಿರ್ದೇಶಕರ ಮೂಲಕ.
3. ಶಾಖಾಧಿಕಾರಿಗಳು, ಇ-ಆಡಳಿತ, ಪದವಿ ಪೂರ್ವ ಶಿಕ್ಷಣ ಇಲಾಖೆ ಬೆಂಗಳೂರು ಇವರಿಗೆ ಎಲ್ಲಾ ಉಪ ನಿರ್ದೇಶಕರುಗಳ ಕಛೇರಿಗೆ ವೆಬ್‌ಸೈಟ್‌ಗೆ ಅಳವಡಿಸಲು.
4. [illegible]

# ಕನ್ನಡ ಜಾನಪದ ಪರಿಷತ್

ಜಾನಪದ ಪ್ರಪಂಚ

KANNADA JANAPADA PARISHATH

| ಅಧ್ಯಕ್ಷರು | ಕಾರ್ಯಾಧ್ಯಕ್ಷರು | ಕಾರ್ಯದರ್ಶಿಗಳು | ಖಜಾಂಚಿ |
|---|---|---|---|
| ಟಿ.ಕೆ.ಗೌಡ | ಡಾ. ಎಸ್.ಬಾಲಾಜಿ | ವಿಠ್ಠಲ್ ಹೆಚ್.ಪೇರುಮನೆ | ಡಾ. ಕನಕತಾರ |


CNo: 17172/2016-17
DT: 2.2.2017

ಸಂಖ್ಯೆ: ಕಜಾಪ/115/ವಿಕಾಸ ಜಾನಪದ/2016–17 ದಿನಾಂಕ: 01.02.2017

ಗೆ,
ನಿರ್ದೇಶಕರು
ಪದವಿ ಪೂರ್ವ ಶಿಕ್ಷಣ ನಿರ್ದೇಶನಾಲಯ
ಮಲೇಶ್ವರಂ
ಬೆಂಗಳೂರು.

ಮಾನ್ಯರೇ,

ವಿಷಯ: ಕನ್ನಡ ಜಾನಪದ ಪರಿಷತ್ತಿನ "ವಿಕಾಸಕ್ಕಾಗಿ ಜಾನಪದ" ಕಾರ್ಯಕ್ರಮವನ್ನು ರಾಜ್ಯದ ಎಲ್ಲಾ ಪದವಿ ಪೂರ್ವ ಕಾಲೇಜಿನಲ್ಲಿ ನಡೆಸಲು ಅನುಮತಿಸುವ ಕುರಿತು.

***************

M
01/02/17

ಈ ಮೇಲ್ಕಂಡ ವಿಷಯಕ್ಕೆ ಸಂಬಂಧಿಸಿದಂತೆ ಕನ್ನಡ ಜಾನಪದ ಪರಿಷತ್ ಕರ್ನಾಟಕ ರಾಜ್ಯಾದ್ಯಾಂತ ಜಾನಪದ ಕಲೆಗಳ ಕ್ಷೇತ್ರಕಾರ್ಯ, ದಾಖಲೀಕರಣ, ತರಬೇತಿ ಮೂಲಕ ಜನಪದ ಕಲೆಗಳನ್ನು ತಮ್ಮ ಜಿಲ್ಲೆಯಲ್ಲಿ ಸಂರಕ್ಷಿಸುವ ಸಲುವಗಿ ಗ್ರಾಮ ಹಂತದಿಂದಲು ಸಮಿತಿಗಳನ್ನು ರಚಿಸಿ ಜಾನಪದ ಕಾರ್ಯವನ್ನು ಮಾಡುವ ಸಲುವಾಗಿ ಜಿಲ್ಲಾ ಘಟಕಗಳನ್ನು ರಚಿಸಿರುತ್ತದೆ ರಾಜ್ಯದಲ್ಲಿ ಈಗಾಗಲೇ 29 ಜಿಲ್ಲಾ ಘಟಕಗಳು ರಚನೆಗೊಂಡಿದ್ದು ಕಾರ್ಯಪ್ರವೃತಿಯಲ್ಲಿದೆ. ಕನ್ನಡ ಜಾನಪದ ಪರಿಷತ್ ಕೇಂದ್ರ ಕಛೇರಿಯನ್ನು ಬೆಂಗಳೂರಿನಲ್ಲಿ ಸ್ಥಾಪಿಸಿದ್ದು ರಾಮನಗರ ಜಿಲ್ಲೆಯ ಮಾಗಡಿ ತಾಲ್ಲೂಕಿನ ತಾಳೆಕೆರೆ ಗ್ರಾಮದಲ್ಲಿ 10 ಎಕರೆ ವಿಸ್ತರಣದಲ್ಲಿ ಜಾನಪದ ಪ್ರಪಂಚ ಬಿ.ಜಿ.ಎಸ್ ಜಾನಪದ ತರಬೇತಿ ಕೇಂದ್ರವು ಸ್ಥಾಪಿಸಲಾಗುತ್ತಿದೆ.

-2

A(od
08/02/17

... 36/88, ... ನಗರ, ಲಗೆರೆ ಹೊರವರ್ತುಲ ರಸ್ತೆ, ಬೆಂಗಳೂರು-560058

ಶಾಲಾ ಕಾಲೇಜುಗಳಲ್ಲಿ ಜಾನಪದ ಚಟುವಟಿಕೆಗಳು ಹಮ್ಮಿಕೊಳ್ಳುವುದರಿಂದ ವಿದ್ಯಾರ್ಥಿಗಳಿಗೆ ನಮ್ಮ ಸಾಂಸ್ಕೃತಿಯ ಮೂಲಬೇರಾದ ಜಾನಪದ ಪರಿಚಯ ಹಾಗೂ ಜಾಗೃತಿಯನ್ನು ಮೂಡಿಸಲಾಗುತ್ತದೆ. ಪದವಿ ಪೂರ್ವ ಕಾಲೇಜಿನ ವಿದ್ಯಾರ್ಥಿಗಳಲ್ಲಿ ಜಾನಪದ ದಿಗ್ಗಜರ, ಕಲಾವಿದರ, ಕಲಾಪ್ರಕಾರ ಕುರಿತು ವಿಚಾರ ಸಂರ್ಕಿಣಾ, ಕಮ್ಮಟಗಳನ್ನು ಆಯೋಜಿಸುವುದು. ಪದವಿ ಪೂರ್ವ ಕಾಲೇಜಿನ ವಿದ್ಯಾರ್ಥಿಗಳಿಗೆ ಉಚಿತವಾಗಿ ಚಾನಪದ ಕಲಾ ಪ್ರಕರಗಳಾದ ಡೊಳ್ಳುಕುಣಿತ, ಪಟ್ಟಕುಣಿತ, ಕಂಸಾಳೆ, ಗೋರವರ ಕುಣಿತ, ಕೋಲಾಟ, ಜಾನಪದ ಗೀತೆ ಪ್ರಕಾರಗಳಾದ ಸೋಬನೆಪದ, ಬಿಸುಕಳ್ಳಿನಪದ, ಲಾವಣಿ, ಗೀಗಿಪದ, ಜಾನಪದ ಮಾಹಕಾವ್ಯಗಳ ಬಿಡಿಗೀತಿಗಳು ಕುರಿತು ತರಬೇತಿಯನ್ನು ನೀಡಲಾಗುವುದು. ಈ ಕಾರ್ಯಕ್ರಮದ "ವಿಕಾಸಕ್ಕಾಗಿ ಜಾನಪದ" ಶೀರ್ಷಿಕೆ ಅಡಿಯಲ್ಲಿ ಏರ್ಪಡಿಸಲಾಗುವುದು. ಇದ್ದರಿಂದ ವಿದ್ಯಾರ್ಥಿಗಳಿಗೆ ಪದವಿ ಪೂರ್ವ ಕಾಲೇಜುಗಳ ರಾಜ್ಯಮಟ್ಟದ ಸಾಂಸ್ಕೃತಿ ಸ್ಪರ್ದೇಗಳಿಗೆ ಅನುಕೂಲವಾಗುತದೆ ಹಾಗೂ ನಮ್ಮ ಕರ್ನಾಟಕದ ಜಾನಪದ ಸಾಂಸ್ಕೃತಿಯನ್ನು ಪರಿಚಿಯಸುವಂತಾಗುತ್ತದೆ. ಈ ಕಾರ್ಯಕ್ರಮವನ್ನು ಸೆಪ್ಟಂಬರ್ 2016 ರಿಂದ ಪ್ರಾರಂಭಿಸಲಾಗುತ್ತದೆ. ಹೆಚ್ಚಿನ ವಿವರಗಳಿಗೆ ಕನ್ನಡ ಜಾನಪದ ಪರಿಷತ್‌ನ ರಾಜ್ಯ ಕಾರ್ಯಾದ್ಯಕ್ಷರಾದ ಡಾ.ಎಸ್.ಬಾಲಜಿ ಮೊ: 9900774442 ಇ-ಮೇಲ್-janapadaprapancha@gmail.com. ಸಂಪರ್ಕಿಸಬಹುದಾಗಿದೆ.

ಆದ್ದುದರಿಂದ, ದಯಾಮಾಡಿ ತಾವು ರಾಜ್ಯದ ಎಲ್ಲಾ ಪದವಿ ಪೂರ್ವ ಕಾಲೇಜಗಳಿಗೆ ಸುತ್ತೋಲೆಯ ಮೂಲಕ ಈ ಕಾರ್ಯಕ್ರಮವನ್ನು ಏರ್ಪಡಿಸಲು ಅನುಮತಿ ನೀಡುವಂತೆ ನಿರ್ದೇಶಿಸಲು ಈ ಮೂಲಕ ಕೋರಲಾಗಿದೆ.

ವಂದನೆಗಳೊಂದಿಗೆ

ತಮ್ಮ ವಿಶ್ವಾಸಿ,

2/2/17

(ಟಿ. ಕೆ. ಗೌಡ)
ಅಧ್ಯಕ್ಷರು